ಡಿ.ಡಬ್ಲ್ಯು. 1

ಇಂದು ದಿಃ 13.11.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಅಸಲು ದಾವೆ 98/2017 ರಲ್ಲಿರುವ ವಾದಿಯ ಪರ ವಕೀಲರಾದ ಶ್ರೀ.ಹೆಚ ಸಿ ಕೆ ರವರಿಂದ,**

1. ನನ್ನ ಮುಖ್ಯವಿಚಾರಣೆಯ ಶಪತ ಪತ್ರದಲ್ಲಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ದಾವಾ ಆಸ್ತಿಗಳೆಂದರೆ ಎರಡು ಜಮೀನು ಒಂದು ಮನೆ ಎಂದರೆ ಸರಿ. ಸದರಿ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳೆಂದರೆ ಸರಿ. ನನ್ನ ಸಹೋದರನಾದ ಫಕೀರಪ್ಪ ಮನೆಯ ಯಜಮಾನನಾಗಿದ್ದ ಎಂದರೆ ಸರಿ. ಸದರಿ ನನ್ನ ತಂದೆಗೆ ನಾನು, ಫಕ್ಕೀರಪ್ಪ ಮತ್ತು ಕೇದಾರಪ್ಪ ಹಾಗೂ ಬಸವರಾಜ ಎಂಬ ಮಕ್ಕಳು ಇದ್ದೆವು ಎಂದರೆ ಸರಿ. ಫಕ್ಕೀರಪ್ಪ ಹಾಗೂ ಬಸವರಾಜ ಇವರು ಈಗ ತೀರಿಹೋಗಿದ್ದಾರೆ.

2. ಬಸವರಾಜನ ಹೆಂಡತಿ ಮಕ್ಕಳು ಅಸಲು ದಾವೆ 98/2017 ರಲ್ಲಿ 3 ಮತ್ತು 4 ನೇ ಪ್ರತಿವಾದಿಯರೆಂದರೆ ಸರಿ. ನನ್ನ ಇನ್ನೊಬ್ಬ ಸಹೋದರನಾದ ಪಕ್ಕೀರಪ್ಪನ ಹೆಂಡತಿ ಅಸಲು ದಾವೆ 98/2017 ರಲ್ಲಿ 2 ನೇ ವಾದಿಯಾಗಿರುತ್ತಾಳೆ ಎಂದರೆ ಸರಿ. ಸದರಿ 2 ನೇ ವಾದಿಯ ಮಗ 1 ನೇ ವಾದಿ ಮಂಜುನಾಥ ಆಗಿದ್ದಾನೆ ಎಂದರೆ ಸರಿಯಲ್ಲ. ನನ್ನ ಸಹೋದರ ಪಕೀರಪ್ಪ ತೀರಿಕೊಂಡು ಈಗ ಸುಮಾರು 25-26 ವರುಷಗಳು ಕಳೆದಿರುತ್ತವೆ.

3. ನನ್ನ ಸಹೋದರ ಪಕೀರಪ್ಪ ತೀರಿಕೊಂಡ ನಂತರ ಈ ದಾವಾ ಆಸ್ತಿಗಳ ಉತಾರಗಳಲ್ಲಿ ಅವನ ಹೆಸರು ಕಡಿಮೆಯಾಗಿದೆ ಎಂದರೆ ಸಾಕ್ಷಿ ನುಡಿಯುತ್ತಾರೆ ಅವನ ಹೆಸರು ಬರಲೆ ಇಲ್ಲ ಎಂದು. ನಿಪಿಃ 1 ರಲ್ಲಿ ಅಸಲು ದಾವೆ 98/2017 ರ 1 ನೇ ವಾದಿಯ ಹೆಸರು ಇದೆ ಎಂದರೆ ಸರಿ. ನಿಪಿಃ 2 ರಲ್ಲೂ ಕೂಡಾ 1 ನೇ ವಾದಿಯ ಹೆಸರು ಇದೆ ಎಂದರೆ ಸರಿ. ಸದರಿ ಉತಾರಗಳನ್ನು ತೆಗೆಸಿದ ನಂತರ ಅವನ ಹೆಸರು ಇರುವ ಬಗ್ಗೆ ನನಗೆ ತಿಳಿದು ಬಂದಿರುತ್ತದೆ. ಸದರಿ 1 ನೇ ವಾದಿಯ ಹೆಸರು ರದ್ದು ಮಾಡಲು ಉಪವಿಭಾಗ ಅಧಿಕಾರಿಗಳ ನ್ಯಾಯಾಲಯದಲ್ಲಿ ಯಾವುದೇ ಅರ್ಜಿ ಸಲ್ಲಿಸಿಲ್ಲ.

4. ಈ ಮೊದಲು ಅಸಲು ದಾವೆ 314/2013 ನ್ನು ನಾವು ಅಸಲು ದಾವೆ 98/2017ರ ವಾದಿಯರ ಮೇಲೆ ಮಾಡಿದ್ದೆವು ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ಸಹೋದರ ಪಕೀರಪ್ಪ ಯಲ್ಲವ್ವನನ್ನು ಮದುವೆಯಾದ ಬಗ್ಗೆ ಬರೆದಿದ್ದೇವೆ ಎಂದರೆ ಸರಿ. ಸದರಿ ದಾವೆಯನ್ನು ಯಾವ ಕಾರಣಕ್ಕಾ ಹಿಂದೆ ತೆಗೆದುಕೊಂಡಿದ್ದೆವು ಎಂದು ನನಗೆ ಮಾಹಿತಿ ಇಲ್ಲ. ಸದರಿ ದಾವೆ ಹಿಂದೆ ತೆಗೆದ ನಂತರ ಈ ಅಸಲು ದಾವೆ 109/2017 ನ್ನು ಮಾಡಿದ್ದೇವೆ ಎಂದರೆ ಸರಿ.

5. ನನ್ನ ಅಣ್ಣ ಪಕೀರಪ್ಪ ಮಾನಸಿಕವಾಗಿ ಅಸ್ತವ್ಯಸ್ಥನಾಗಿದ್ದ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ. ಸಾಕ್ಷಿ ಮುಂದುವರೆದು ನುಡಿಯುತ್ತಾರೆ ಅವನನ್ನು ಆಸ್ಪತ್ರೆಗೆ ತೋರಿಸಿಲ್ಲ. ನನ್ನ ಅಣ್ಣ ಪಕೀರಪ್ಪನಿಗೆ ಯಾವುದೇ ಮಾನಸಿಕ ಕಾಯಿಲೆ ಇಲ್ಲ ಅವನು ಆರೋಗ್ಯವಾಗಿ ಇದ್ದ ಎಂದರೆ ಸರಿಯಲ್ಲ. ಮೇಲೆ ಹೇಳಿದ ಯಲ್ಲವ್ವ ಮಡಿವಾಳಪ್ಪನ ಜೊತೆಗೆ ಮದುವೆಯಾದ ಕುರಿತು ನಾನು ದಾಖಲಾತಿ ಹಾಜರು ಪಡಿಸಿಲ್ಲ. ಸದರಿ ಯಲ್ಲವ್ವ ಇವಳನ್ನು ನನ್ನ ಅಣ್ಣ ಸರಿಯಾಗಿ ನೋಡಿಕೊಳ್ಳದಂತೆ ಮಾಡಿ ಅವಳು ಮದುವೆಯಾದ ಮೂರು ವರುಷಕ್ಕೆ ಮನೆಯಿಂದ ಹೊರಗೆ ಹಾಕುವ ಹಾಗೆ ನಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಅಣ್ಣನಿಗೆ ಆರೋಗ್ಯ ಸರಿ ಇಲ್ಲದಾಗ ಸದರಿ ಯಲ್ಲವ್ವಳೆ ಜೋಪಾನ ಮಾಡಿದ್ದಾಳೆ ಎಂದರೆ ಸರಿಯಲ್ಲ. 1 ನೇ ವಾದಿ ಮಂಜುನಾಥನ ತಂದೆ ಪಕೀರಪ್ಪ ಎಂದು ಮತದಾರರ ಚೀಟಿಯಲ್ಲಿ ನಮೂದಾಗಿದೆ ಎಂದರೆ ಸರಿಯಲ್ಲ.

6. ಅಸಲು ದಾವೆ 98/2017 ರಲ್ಲಿರುವ ವಾದಿಯರಿಗೆ ವಿಭಾಗ ಕೊಡಬೇಕಾಗುತ್ತದೆ ಎಂಬ ಕಾರಣಕ್ಕಾಗಿ ನಾವು ಸುಳ್ಳು ದಾವೆ 109/2017 ನ್ನು ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಅಣ್ಣನ ಜೀವಿತ ಕಾಲದಲ್ಲಿ ಅವನ ಹೆಂಡತಿಯಾದ ಯಲ್ಲವ್ವಳೊಂದಿಗೆ ವಿವಾಹ ವಿಚ್ಛೇದನ ಆಗಿರಲಿಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಅದೆ.

2 ನೇ ಹೆ ಹಿ ದಿ ನ್ಯಾ ಮತ್ತು ಜೆಎಂಎಫಸಿ
ಧಾರವಾಡ.